OS No. 79/2018

DW-1

**(ಇಂದು ದಿಃ 13-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.NR ವಕೀಲರಿಂದಃ-**

ಸರ್ವೆ ನಂಬರ 497/5 ರ ಜಮೀನನ್ನು ನಾನು ನೋಡಿದ್ದೇನೆ. ಸದರಿ ಜಮೀನಿನ ಚೆಕ್ ಬಂದಿ ಹೇಳಲು ಆಗುವುದಿಲ್ಲ, ವಾದಿಯರು ವಾದ ಪತ್ರದಲ್ಲಿ ತೋರಿಸಿರುವ ದಾವಾ ಸ್ವತ್ತುಗಳ ಚೆಕ್ ಬಂದಿ ಸುಳ್ಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆಯ ನಂಬರ 8-113/8 ರ ಮನೆಯ ಪೂರ್ವಕ್ಕೆ ರಮೇಶ ಮತ್ತು ನಮ್ಮ ಜಂಟಿ ಗೋಡೆ ಇದೆ. ಪಶ್ಚಿಮಕ್ಕೆ ನನ್ನ ಹೆಂಡತಿ ವರಲಕ್ಷ್ಮೀ ಹೆಸರಿನ ಪ್ಲಾಟ್ ನಂಬರ 9 ಇದೆ. ಉತ್ತರಕ್ಕೆ ರಸ್ತೆ. ನಂತರ ಲಕ್ಷ್ಮಮ್ಮ . ದಕ್ಷಿಣಕ್ಕೆ ರಸ್ತೆ. ನಂತರ ತರಕಾರಿ ಮಾರುಕಟ್ಟೆ ಇದೆ. ದಾವಾ ಐಟೆಮ್ ನಂಬರ 11 ರ ಚೆಕ್ ಬಂದಿ ತಪ್ಪು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆಯ ಮಾತೃ ಛಾಯ PU ಕಾಲೇಜಿನಲ್ಲಿ ಲೇಕ್ಚರರ್ ಆಗಿ ಕೆಲಸ ಮಾಡುತ್ತೇನೆ. 1993 ರಲ್ಲಿ ನಾನು ಅಲ್ಲಿ ನೌಕರಿಗೆ ಸೇರಿದೆ , 1997 ರಲ್ಲಿ ನನ್ನ ಸೇವೆ ಅನುದಾನಕ್ಕೆ ಒಳಪಟ್ಟಿತ್ತು. ನನ್ನ ಸೇವೆ ಕಾಯಂ ಗೊಳ್ಳುವ ಮುಂಚೆ ಸೇಡಂ ನ ವಿದ್ಯಾನಗರದಲ್ಲಿ ಪ್ಲಾಟ್ ಖರೀದಿ ಮಾಡಿದ್ದೇನೆ ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಜಮೀನು ಖರೀದಿ ಮಾಡಿದಾಗ ನಾನು ಮೈನರ್ ಅಗಿದ್ದೆ. ನನ್ನ ಹೆಸರಿನಲ್ಲಿ ಜಮೀನು ಖರೀದಿ ಮಾಡಿದಾಗ ನಾನು PUC ಓದುತ್ತಿದ್ದೆ. ಸದರಿ ಖರೀದಿಗೆ ಹಣ ಹೇಗೆ ಬಂತು ನನಗೆ ವಯಕ್ತಿಕ ಮಾಹಿತಿ ಇಲ್ಲ . ಸಾಕ್ಷಿ ಮುಂದುವರೆದು ಬೆಳ್ಳಿ ಬಂಗಾರ ಮಾರಾಟ ಮಾಡಿ ಹಣ ಬಂದಿದೆ ಎಂದು ನನ್ನ ತಾಯಿ ನನಗೆ ಹೇಳಿದ್ದರು ಎಂದು ಹೇಳುತ್ತಾರೆ. ಈ ದಾವೆಯಲ್ಲಿ ನನ್ನ ತಾಯಿಗೆ ಯಾವುದದೇ ಮಾಹಿತಿ ಕೋಡದೆ ನಾನೇ ವಕೀಲರಿಗೆ ಮಾಹಿತಿ ಕೊಟ್ಟು ಜಂಟಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

OS No. 79/2018

DW-1

ವಿಲ್ ಡೀಡ್ ಆಗುವಾಗ ನನ್ನ ತಾಯಿ ಇರಲಿಲ್ಲ. ವಿಲ್ ಡೀಡ್ ಆದಾಗ ನನ್ನ ಮಗ ರೋಹಿತ್ ರಡ್ಡಿ ಯಾದಗೀರಿಯ PU ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದರು. ಈಗ ಬಾಲ್ಕಿ ಯಲ್ಲಿ ಲೆಕ್ಚರರ್ ಆಗಿದ್ದಾರೆ . ರೋಹಿತ್ ರಡ್ಡಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಹೇಗಾದರು ಮಾಡಿ ಭಾಗ ಕೋಡಬಾರದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗ ಸುಳ್ಳು ವಿಲ್ ಡೀಡ್ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**